1/7

# ANSWER KEY IMPROVEMENT october
## FIRST YEAR HIGHER SECONDARY EXAMINATION ~~JUNE~~ 2022
## PART- III
## SUBJECT: KANNADA (OPTIONAL)

CODE NO: FY 816 VERSION B

80 SCORES $2^1/_2$ HOURS

| ಕ್ರಮ ಸಂಖ್ಯೆ | ಉತ್ತರ ಸೂಚಕ | ಅಂಕ | ಒಟ್ಟು ಅಂಕಗಳು |
|---|---|---|---|
| 1 | ಕೂಡಲಸಂಗಮದೇವ | 1 | 1 |
| 2 | ಜನಪದ ಕಾವ್ಯ | 1 | 1 |
| 3 | ಬೆಲ್ಲ | 1 | 1 |
| 4 | ಧಾರವಾಡ | 1 | 1 |
| 5 | ಕಾಪಾಡು | 1 | 1 |
| 6 | ಪಯಣ | 1 | 1 |
| 7 | ದೀಪ್ತಿಯಂತೆ+ಇರಬೇಕು | 1 | 1 |
| 8 | ಹಾಡನು, ಹಾಡಳು, ಹಾಡದು---ಯಾವುದಾದರೂ ಒಂದು | 1 | 1 |
| 9 | ಆದಿತ್ಯ, ರವಿ, ಭಾಸ್ಕರ, ನೇಸರ---ಹೀಗೆ ಯಾವುದಾದರೂ ಎರಡು. | 1 | 1 |
| 10 | ಬಸ್ ಸ್ಟ್ಯಾಂಡ್ | 1 | 1 |
| 11 | ಬಸವಣ್ಣನವರು ವಚನ ಸಾಹಿತ್ಯ ಕ್ಷೇತ್ರದಲ್ಲಿ ಅನನ್ಯ ಸಾಧನೆಯನ್ನು ಮಾಡಿದವರು. ಅವರು ಭಕ್ತಿ ಭಂಡಾರಿ ಎಂದೇ ಪ್ರಸಿದ್ಧರಾದವರು. | 2 | 2 |
| 12 | ನನ್ನ ಅಣ್ಣನ ಮಗನ ಲಗ್ನದ ಕಾರ್ಯ ಮುಂಜಾನೆಯೇ ಇತ್ತು. ಹಾಗೆ ನೋಡಿದರೆ ವೇಳೆ ಆಗಿದೆ ಎಂದಳು ಆಕೆ. | 2 | 2 |

| | | | |
|---|---|---|---|
| | ಹೊಸ ಸೀರೆಯಾಕೆ...ಈ ರೀತಿಯಲ್ಲಿ ಹೊಂದುವಂತೆ ಬರೆದಿರಬೇಕು. | | |
| 13 | ಸರಿಯಾದ ಅರ್ಥವನ್ನು ನೀಡುವ ಆಕರ್ಷಕವಾದ ಘೋಷಣಾ ವಾಕ್ಯಗಳಾಗಿರಬೇಕು. | 2 | 2 |
| 14 | ಚಿಕ್ಕ ಮಾತಾದರೂ ಸರಿಯಾಗಿ ಆಲೋಚಿಸದೆ ಆಡಿದಲ್ಲಿ ಅದು ಮನೆಯ ಒಳ್ಳೆಯ ವಾತಾವರಣವನ್ನೇ ಹಾಳು ಮಾಡಬಹುದು. ಹಾಗೆಯೇ ತೂತು ಚಿಕ್ಕದಾದರೂ ಅದರಿಂದ ಆಗಬಹುದಾದ ಅಪಾಯ ದೊಡ್ಡದಾಗಿರಬಹುದು. ಆದುದರಿಂದ ಚಿಕ್ಕದೆಂದು ಯಾವುದನ್ನೂ ನಿರ್ಲಕ್ಷ್ಯ ಮಾಡಬಾರದು. | 2 | 2 |
| 15 | ಅರ್ಥಪೂರ್ಣವಾದ ವಾಕ್ಯವಾಗಿರಬೇಕು. | 2 | 2 |
| 16 | ಏನು ಬಂದಿರುವಿರಿ? ಕ್ಷಮವಲ್ಲವೇ?ಕುಳಿತುಕೊಳ್ಳಿರಿ ಎಂದು ಪ್ರೀತಿಯಿಂದ ಮಾತನಾಡಬೇಕು. ಹೀಗೆ ಹೇಳುವುದರಿಂದ ಏನು ನಷ್ಟವಾಗದು. ಬಂದವರಿಗೆ ಕೊಡಲು ನಮ್ಮಲ್ಲಿ ಏನೂ ಇಲ್ಲದಿದ್ದರೂ ಒಳ್ಳೆಯ ಗುಣವನ್ನಾದರೂ ತೋರಿಸಬೇಕು. ಇಲ್ಲವಾದಲ್ಲಿ ದೇವರು ನಮ್ಮನ್ನು ಶಿಕ್ಷಿಸದೆ ಬಿಡಲಾರ. | 2 | 2 |
| 17 | ಪರಿಮಳಕ್ಕೆ ಆಕಾರವಿಲ್ಲದಂತೆ, ಬೆಳಕಿಗೆ ಆಕಾರವಿಲ್ಲದಂತೆ, ಬೆಳದಿಂಗಳಿಗೆ ಆಕಾರವಿಲ್ಲದಂತೆ ಭಕ್ತನ ಒಳಗೆ ತುಂಬಿದ ಭಕ್ತಿಗೆ ಆಕಾರವಿಲ್ಲ - ಹೀಗೆ ವಚನಕಾರ ವಿವರಿಸಿರುವುದನ್ನು ಬರೆದಿರಬೇಕು. | 2 | 2 |
| 18 | ತಾನೂ ಬಳಸದೆ ಇತರರಿಗೂ ನೀಡದೆ ಇರುವ ಹಣ, ಸಂಪತ್ತು ಇದ್ದು ಏನೂ ಪ್ರಯೋಜನವಿಲ್ಲ. ಅದು ವ್ಯರ್ಥ. ನಮ್ಮ ಸಂಪತ್ತನ್ನು ನಾವು ಉಪಯೋಗಿಸಬೇಕು, ಅಗತ್ಯವಿರುವವರಿಗೆ ನೀಡಲೂ ಬೇಕೆಂಬ ಆಶಯ. | 2 | 2 |

| | | | |
|---|---|---|---|
| 19 | ಸು.ರಂ.ಎಕ್ಕುಂಡಿ-ಅಶ್ವತ್ಥಾಮ<br>ಜಂಬಣ್ಣ ಅಮರಚಿಂತ-ಪೆಟ್ರೋಮ್ಯಾಕ್ಸ್ ಹೊತ್ತವರು<br>ಅಂಬಿಕಾತನಯದತ್ತ-ಮೊದಲಗಿತ್ತಿ<br>ಸವಿತಾ ನಾಗಭೂಷಣ-ಬೆಳಸು | 4 | 4 |
| 20 | ನೀರಿನ ಒಸರನ್ನು ಕಂಡಾಗ ಕೆಲವರು ಬಾವಿಯನ್ನು ತೋಡುವಂತೆ ಹೇಳುತ್ತಾರೆ. ಅರವಟ್ಟಿಗೆ, ಛತ್ರ ಇತ್ಯಾದಿಗಳು ತಮ್ಮದು ಎನ್ನುತ್ತಾರೆ. ಆದರೆ ಪೈರು ಬೆಳೆಯದಿದ್ದರೆ ಸಕಾಲದಲ್ಲಿ ಮಳೆ ಸುರಿಸದಿದ್ದರೆ ಅವರು ಹೇಗೆ ತಾನೆ ನೀರು ಆಹಾರ ಒದಗಿಸಲು ಸಾಧ್ಯ. ಪ್ರತಿಯೊಂದು ದೇವರ ಅನುಗ್ರಹದಿಂದಲೇ ನಡೆಯುತ್ತದೆ ಇತ್ಯಾದಿ ಅಂಶಗಳನ್ನು ಬರೆದಿರಬೇಕು. | 4 | 4 |
| 21 | ಪೆಟ್ರೋಮ್ಯಾಕ್ಸನ್ನು ಹೊತ್ತು ಎಲ್ಲರಿಗೂ ಬೆಳಕನ್ನು ನೀಡುವ ಜನರು ತಮ್ಮ ಜೀವನದಲ್ಲಿ ಬೆಳಕನ್ನು ಕಾಣಲಿಲ್ಲ. ಇವರಿಂದ ಎಲ್ಲರಿಗೂ ಪ್ರಯೋಜನ ಲಭಿಸಿದರೂ ಇವರು ಮಾತ್ರ ಕತ್ತಲೆಯಲ್ಲೇ ಇರುವಂತಾಯ್ತು. ಯಾರು ಇವರನ್ನು ನೆನಪಿಸಲಿಲ್ಲ. ಎಷ್ಟು ಕಷ್ಟ ಅನುಭವಿಸಿದರೂ ಫಲವಿಲ್ಲದೆ ಕೊನೆಗೂ ಅಪರಿಚಿತರಾಗಿಯೇ ಉಳಿದರು. ಇತ್ಯಾದಿ. | 4 | 4 |
| 22 | ಸುಂಕ ಕೊಡುವುದನ್ನು ತಪ್ಪಿಸಲು ಧಾನ್ಯವನ್ನು ರಾತ್ರಿ ಕೊಂಡು ಹೋಗುವಾಗ ಗೋಣಿಯಲ್ಲಿ ತೂತು ಇದ್ದದು ತಿಳಿಯಲಿಲ್ಲ. ಧಾನ್ಯವೆಲ್ಲ ದಾರಿಯಲ್ಲಿ ಸೋರಿ ಹೋಗಿ ಇವನ ಪ್ರಯತ್ನ ವ್ಯರ್ಥವಾದಂತೆಯೇ ಅಳಿಮನದವನ ಭಕ್ತಿ ಕೂಡಾ ವ್ಯರ್ಥ ಎಂಬುದನ್ನು ವಚನದಲ್ಲಿ ಹೇಳಿದಂತೆ ವಿವರಿಸಿರಬೇಕು. | 4 | 4 |
| 23 | ಚಂದ್ರಗುಪ್ತನು ಸಿಂಹದ ಪಂಜರದ ವಿಚಾರ ತಿಳಿದು ಅದರ ರಕ್ಷಕರಲ್ಲಿ ಪ್ರಶ್ನಿಸಿದ್ದು-ಅವರು ಅವನನ್ನು ಪಂಜರ | 4 | 4 |

| | | | |
|---|---|---|---|
| | ಪರೀಕ್ಷಿಸಲು ಹೇಳಿದ್ದು-ಕೃತಕ ಸಿಂಹವೆಂದು ಅವನು ಸಾಬೀತು ಪಡಿಸಿದ್ದು- ಇದರಿಂದಾಗಿ ಬಂಧನದಿಂದ ಬಿಡುಗಡೆಯಾದುದು-ಇತ್ಯಾದಿ. | | |
| 24 | ಸಮಯಕ್ಕೆ ಸರಿಯಾಗಿ ಮಳೆ ಬಾರದೇ ಹೋದಾಗ ಭೂಮಿಯಲ್ಲಿನ ಪಕ್ಷಿ ಮೃಗಾದಿಗಳು ಪಡುವ ಕಷ್ಟ-ಹೆಣ್ಣು ಮಕ್ಕಳು ನೀರನ್ನು ಹುಡುಕಿಕೊಂಡು ಹೋಗುವ ಸ್ಥಿತಿ-ಇತ್ಯಾದಿಗಳನ್ನು ಕೀರ್ತನೆಯಲ್ಲಿ ಹೇಳಿದಂತೆ ಬರೆದಿರಬೇಕು. | 4 | 4 |
| 25 | ಪುಣ್ಯಕೋಟಿಯು ತನ್ನನ್ನು ತಿನ್ನಲು ಹೊರಟ ಹುಲಿಗೆ ತಾನು ಕರುವಿಗೆ ಹಾಲು ಕೊಡಬೇಕಾಗಿದೆ ಎಂದೂ. ಅಲ್ಲಿಯವರೆಗೆ ನನ್ನನ್ನು ತಿನ್ನಬೇಡ. ಹಾಲು ಕೊಟ್ಟು ಪುನಃ ಹಿಂದಿರುಗಿ ಬರುತ್ತೇನೆ ಎಂದು ಹುಲಿಗೆ ಮಾತು ಕೊಟ್ಟಂತೆ ಹಿಂದಿರುಗಿ ಬರುತ್ತದೆ. ತನ್ನ ಪ್ರಾಮಾಣಿಕತೆಯನ್ನು ತೋರಿಸುತ್ತದೆ. ಆ ಮೂಲಕ ಸಮಾಜದಲ್ಲಿ ಎಲ್ಲರೂ ಕೊಟ್ಟ ಮಾತಿಗೆ ತಪ್ಪಬಾರದು ಎಂಬ ಸಂದೇಶ ನೀಡುತ್ತದೆ. | 4 | 4 |
| 26 | ಭೂಮಿಯಲ್ಲಿ ಆಳಿದವರಲ್ಲ ಆಯಾ ಸಮಯದಲ್ಲಿ ಏನೆಲ್ಲ ಮಾಡಿದ್ದರೂ ಭೂಮಿ ತಾಯಿ ಅವರೆಲ್ಲರನ್ನೂ ಸಮಾನವಾಗಿ ಕಂಡಿದ್ದಾಳೆ. ಭೇದಭಾವ ಮಾಡಲಿಲ್ಲ. ಅವರೆಲ್ಲ ನಾಶವಾಗಿ ಹೋದರೂ ಇವಳು ಮಾತ್ರ ಮದುಮಗಳ ಹಾಗೆ ಸದಾ ಶೋಭಿಸುತ್ತಿರುವಳು. ಮುಂದೆ ಅವಳದೇ ಮಕ್ಕಳು ಇಲ್ಲಿ ಒಳ್ಳೆಯ ಮಾರ್ಗದಲ್ಲಿ ಪಡೆದು ಮೆರೆಯುವಂತಾಗಬೇಕು.ಶಾಂತಿ ಸಮಾಧಾನ ನೆಲೆಸಬೇಕು. ಭೂತಾಯಿ ಇನ್ನು ಮದುಮಗಳ ಹಾಗೆ ಇರುವುದು ಬೇಡ- ಹೀಗೆ ಎಲ್ಲ ಅಂಶಗಳನ್ನು ಬರೆದಿರಬೇಕು. | 6 | 6 |

| | | | |
|---|---|---|---|
| 27 | ಬುದ್ಧನ ಹಾಗೂ ಶಿಷ್ಯನಾದ ಆನಂದನೊಳಗಿನ ಸಂಭಾಷಣೆ -ಕುಡಿಯಲು ನೀರು ಕೇಳುವುದು-ಆನಂದ ಅಲ್ಲಿನ ನೀರು ಕೆಸರಾಗಿದೆ ಎಂದು ಹೇಳಿದರೂ ಪುನಃ ಒತ್ತಾಯಿಸುವುದು-ಹಾಗೆ ನೀರು ತರಲು ಹೋದ ಆನಂದನಿಗೆ ಆ ನೀರು ಬುದ್ಧನ ಮಹಿಮೆಯಿಂದಾಗಿ ಹೇಗೆ ಶುದ್ಧವಾಯಿತು ಎಂದು ತಿಳಿದದ್ದು-ಇವೆಲ್ಲವನ್ನೂ ಹೇಗೆ ಸುಂದರವಾಗಿ ನಿರೂಪಿಸಿದ್ದಾರೆ ಎಂದು ಹೇಳಿರಬೇಕು. | 6 | 6 |
| 28 | ಬೇವು ಬೆಲ್ಲಗಳ ಉದಾಹರಣೆ ನೀಡಿ ಸ್ವತಃ ಬದಲಾಗದೇ ಬೇರೆ ಯಾವ ಕಾರ್ಯ ಮಾಡಿಯೂ ಪ್ರಯೋಜನವಿಲ್ಲ. ಒಳಗೊಂದು ಹೊರಗೊಂದು ಸ್ವಭಾವ ತೋರಿಸಿ ಮೋಸ ಮಾಡಿದರೆ ಏನೂ ಫಲವಿಲ್ಲ. ಮಾಡಬೇಕಾದ ಕರ್ತವ್ಯಗಳನ್ನು ಮೊದಲು ಮಾಡಬೇಕೆಂದು ಕೀರ್ತನೆಕಾರರು ಉದಾಹರಣೆಗಳ ಮೂಲಕ ಹೇಳಿದುದನ್ನು ಬರೆದಿರಬೇಕು. | 6 | 6 |
| 29 | ಹೇಮಕೂಟದಿಂದ ಬಂದಮೇಲೆ ಪಾಠಭಾಗದಲ್ಲಿ ಶಕುಂತಲೆಯ ಪಾತ್ರವು ಹೇಗೆ ಮೂಡಿ ಬಂದಿದೆ ಎಂದು ಬರೆದಿರಬೇಕು. | 6 | 6 |
| 30 | ನಾದಿರಾಳ ಹಾಗೂ ರಶೀದ್ ರ ಅನ್ಯೋನ್ಯ ಕುಟುಂಬ ಜೀವನ-ತಂಗಿ ಜಮೀಲಾಳ ಮದುವೆಗೆ ಹಣದ ಅಗತ್ಯ-ಬೇರೆ ದಾರಿ ಇಲ್ಲದೆ ಮಹಮ್ಮದ್ ಖಾನ್ ಅಳಿಯನಲ್ಲಿ ಹಣ ಕೇಳುವುದು-ಆದರೆ ಒಂದು ಸಾವಿರ ರುಪಾಯಿಯನ್ನು ಥಕ್ಕನೆ ಕೇಳಿದಾಗ ಇಷ್ಟಪಡದ ರಶೀದ್ ತನ್ನಲ್ಲಿ ಹಣವಿಲ್ಲ ಎಂದು ಹೇಳುವ ಸಂದರ್ಭದಲ್ಲಿ ತಪ್ಪಿ ಬಳಸಿದ ನಾನು ಬ್ಯಾಂಕ್ ಇಟ್ಟಿದ್ದೇನೆಯೇ ಎಂಬ ಮಾತು- ಅದರಿಂದಾಗಿ ಕೋಪಗೊಂಡ ಖಾನ್ ಯಾರಿಗೂ ತಿಳಿಸದೆ ತನ್ನ ಮನೆಗೆ ಕರೆದುಕೊಂಡು ಹೋದುದು-ಅಲ್ಲಿ ತನ್ನ ಮುಂದಿನ | 6 | 6 |

DITTO WS

| | | | |
|---|---|---|---|
| | ನಿರ್ಧಾರ ತಿಳಿಸಿದ್ದು ಇತ್ಯಾದಿ ಅಂಶಗಳನ್ನು ಬರೆದಿರಬೇಕು. | | |
| 31 | ಪೆಂಟಯ್ಯನ ಇದ್ದಿಲ ಅಂಗಡಿಯಲ್ಲಿನ ದುಡಿಮೆ-ಒಂದೇ ಅಂಗಿ-ಹೊಸ ಅಂಗಿ ತಗೆವ ಅಸೆ-ಹಣ ಕೂಡಿ ಇಟ್ಟು ಹೊಸ ಬಿಳಿ ಅಂಗಿ ಖರೀದಿಸಿದ್ದು-ಸಿನಿಮಾ ನೋಡಲು ಹೊರಟದ್ದು-ಪೊಲೀಸ್ ಪಟೇಲನಿಗೆ ಇದ್ದಲು ಕೊಡಲು ಮರೆತದ್ದು-ಅವನು ಇವನನ್ನು ತಡೆದು ಪುನಃ ಇದ್ದಿಲ ಅಂಗಡಿಗೆ ಕರೆದು ಕೊಂಡು ಹೋದದ್ದು-ಪೆಂಟಯ್ಯನ ಕನಸು ನನಸಾಗದೇ ಹೋದದ್ದು-ಇತ್ಯಾದಿ | 6 | 6 |
| 32 | ಉತ್ರಾಜಿ ಹಾಗೂ ಅವಳ ಅತ್ತೆಗೂ ಜಗಳವಾದುದು-ಅತ್ತೆ ಸೊಸೆಯನ್ನು ತವರು ಮನೆಗೆ ಕಳುಹಿಸಲು ಮಗನಲ್ಲಿ ಹೇಳಿದ್ದು-ಮಗನಿಗೆ ಮನಸ್ಸಿಲ್ಲದಿದ್ದರೂ ತಾಯಿಗೆ ಎದುರು ನಿಲ್ಲಲು ಅಸಾಧ್ಯವಾದುದು-ಎಲ್ಲವನ್ನು ಅರ್ಥ ಮಾಡಿಕೊಂಡ ಉತ್ರಾಜಿ ತನ್ನನ್ನು ಇಷ್ಟವಿಲ್ಲದವರೊಂದಿಗೆ ಇರಲು ಬಯಸದೆ ತವರು ಮನೆಗೆ ಹೋದುದು- ಅಲ್ಲಿ ಯಾರೂ ಇವಳಿಗೆ ಸಹಾಯ ಮಾಡಲು ಮುಂದೆ ಬಾರದಿದ್ದಾಗ ಅಸಹಾಯಕಳಾದ ತಾಯಿ ಉತ್ತರೆ ಮಳೆಯಾಗಿ ಹೊರಡಲು ಹೇಳಿದ್ದು-ಇತ್ಯಾದಿ | 6 | 6 |
| 33 | ಅಣ್ಣನ ಮಗನ ಮದುವೆಗೆ ಬಾಶಿಂಗದೊಂದಿಗೆ ಹೊರಟ ಸಣ್ಣೇರಿ-ಕಿತ್ತೂರಿನಿಂದ ಬಸ್ಸು ಸಿಗದೆ ತಳಮಳಗೊಂಡದ್ದು-ಅವಳ ಮುಗ್ಧತೆ-ಮಲಕಾಜಿಯ ಪರಿಚಯ-ಬಸ್ಸು ಸಿಗದೇ ಹೋದಾಗ ಟ್ರಕ್ ನಲ್ಲಿ ತಡವಾಗಿ ಹೊರಟದ್ದು-ಆದರೆ ಅವರು ಯರಗಟ್ಟಿಗೆ ತಲುಪಿದಾಗ ತಡವಾಗಿ ಮದುವೆ ಕಳೆದದ್ದು-ದುಃಖ ಪಟ್ಟದ್ದು-ಮಲಕಾಜಿ ಅವಳನ್ನು ಮದುವೆಯಾಗಲು ಕೇಳಿಕೊಂಡದ್ದು-ಸಂಭ್ರಮದಿಂದ ಎಲ್ಲರೂ ಸೇರಿ ಮದುವೆ ನೆರವೇರಿಸುವುದು-ಇತ್ಯಾದಿ ಅಂಶಗಳನ್ನು ಕಥೆಗಾರರು | 8 | 8 |

| | | | |
|---|---|---|---|
| | ಹೇಗೆ ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ ಎನ್ನುವುದನ್ನು ಬರೆದಿರಬೇಕು. | | |
| 34 | ತನ್ನ ಮಗಳ ವರ್ತನೆಯನ್ನು ಕಂಡಾಗ ತಾಯಿಗೆ ಆಗುವ ಆಶ್ಚರ್ಯ-ತನ್ನ ಹಾಗೂ ಇಂದಿನವರ ಜೀವನ ರೀತಿ ನೆನಪಾಗುವುದು-ಮಗಳ ವರ್ತನೆಯಿಂದಾಗಿ ಆಗುವ ಭಯ, ಚಿಂತೆ, ಪಶ್ಚಾತಾಪ ಇತ್ಯಾದಿ ಅಂಶಗಳನ್ನು ಕವನದಲ್ಲಿ ಹೇಳಿದಂತೆ ಬರೆದಿರಬೇಕು. | 8 | 8 |
| 35 | ಗೆಳೆಯರೆಲ್ಲ ಹಾಲು ಕುಡಿದು ಬರುವುದನ್ನು ಕಂಡು ಅಶ್ವತ್ಥಾಮನಿಗೂ ಹಾಲು ಕಡಿಯುವ ಬಯಕೆ ಉಂಟಾದುದು-ತಾಯಲ್ಲಿ ಕೆಳಿದಾಗ ಬಡವರಾದ ಅವರಿಗೆ ಅದು ನೀಡಲು ಅಸಾಧ್ಯವಾದುದು-ಮಗನ ಹಾಲಿನ ಆಸೆಯನ್ನು ಪೂರೈಸಲು ಸಾಧ್ಯವಾಗದಾಗ ಹಿಟ್ಟನ್ನು ಕಲಸಿ ಹಾಲನ್ನು ನೀಡುವುದು-ಆದರೆ ಅವನಿಗೆ ನಂತರ ತಿಳಿಯುವುದು-ಮುಂದೆ ಹಾಗೆ ಹಿಟ್ಟನ್ನು ಕಲಸಿ ಕೊಟ್ಟಾಗ ಸ್ವೀಕರಿಸದೇ ಇರುವುದು-ಹೆತ್ತವರ ದುಃಖ ಇತ್ಯಾದಿ ಅಂಶಗಳನ್ನು ಬರೆದಿರಬೇಕು. | 8 | 8 |